# ‘ಎನ್’ ಎಂದರೆ ‘ನ್ಯಾಯಮೂರ್ತಿ’!



‘ಸಜ್ಜನರ ಸಿಟ್ಟಿಗೆ ಎಷ್ಟೊಂದು ಶಕ್ತಿಯಿದೆ’ ಎನ್ನುವುದನ್ನು ‘ನ್ಯಾಯಮೂರ್ತಿ’ ಎನ್.ಸಂತೋಷ್ ಹೆಗ್ಡೆ ತೋರಿಸಿಕೊಟ್ಟಿದ್ದಾರೆ. ಎರಡು ವರ್ಷ ಪೂರೈಸಿದ ನೆಪದಲ್ಲಿ ಮಾಧ್ಯಮದ ತುಂಬ ಜಾಹೀರಾತು ಜಾಲದಲ್ಲಿ ಮಿಂಚಬೇಕೆಂದಿದ್ದ ಬಿಜೆಪಿ ಸರಕಾರಕ್ಕೆ ಸಂತೋಷ್ ಹೆಗ್ಡೆ ಮರ್ಮಾಘಾತ ನೀಡಿದ್ದಾರೆ. ಕರ್ನಾಟಕ ಸರಕಾರದ ಲೋಕಾಯುಕ್ತ ಹುದ್ದೆಗೆ ರಾಜೀನಾಮೆ ಒಗೆದು, ಭ್ರಷ್ಟ ಸರಕಾರಿ ವ್ಯವಸ್ಥೆಯ ವಿರುದ್ಧ ಕಿಡಿ ಕಾರಿದ್ದಾರೆ. ‘ಎನ್’ ಎಂದರೆ ಹುಟ್ಟೂರು ‘ನಿಟ್ಟೆ’ಯೂ ಹೌದು, ‘ನ್ಯಾಯಮೂರ್ತಿ’ಯೂ ಹೌದು!

ಸಂತೋಷ್ ಹೆಗ್ಡೆ ರಾಜೀನಾಮೆಯಿಂದ ಕೆಲವು ಭ್ರಷ್ಟ ರಾಜಕಾರಣಿಗಳು ಮತ್ತು ಅಧಿಕಾರಸ್ಥರನ್ನು ಬಿಟ್ಟರೆ ಇನ್ಯಾರಿಗೂ ಸಂತೋಷವಾಗಿಲ್ಲ ಎನ್ನುವುದು ನಿಜಕ್ಕೂ ಸಂತೋಷದ ವಿಷಯವೇ. ಅದೇ ವೇಳೆ, ಪ್ರಾಮಾಣಿಕ ನ್ಯಾಯಮೂರ್ತಿಯೊಬ್ಬರು ಇಂತಹ ಭ್ರಷ್ಟ ವ್ಯವಸ್ಥೆಯ ಬಲಿಪಶುವಾದರಲ್ಲ ಎನ್ನುವುದು ದುಃಖದ ವಿಷಯವೂ ಹೌದು.

ಸಂತೋಷ್ ಹೆಗ್ಡೆ ಹುಟ್ಟಿದ್ದು ಉಡುಪಿ ಜಿಲ್ಲೆಯ (ಕಾರ್ಕಳಕ್ಕೆ ಹತ್ತಿರದ) ನಿಟ್ಟೆ ಎಂಬ ಗ್ರಾಮದಲ್ಲಿ. (ಜೂನ್ 16, 1940) ಮಂಗಳೂರಿನ ಸೈಂಟ್ ಅಲೋಸಿಯಸ್ ಕಾಲೇಜಿನಲ್ಲಿ ಶಿಕ್ಷಣದ ಬಳಿಕ ಬೆಂಗಳೂರಿನ ಸರಕಾರಿ ಕಾನೂನು ಕಾಲೇಜಿನ ವಿದ್ಯಾರ್ಥಿಯಾದರು. (ಈಗದು ವಿಶ್ವವಿದ್ಯಾಲಯ ಕಾನೂನು ಕಾಲೇಜು.) ವಿದ್ಯಾರ್ಥಿಯಾಗಿದ್ದಾಗ ಒಳ್ಳೆಯ ಹಾಕಿ ಆಟಗಾರರಾಗಿದ್ದ ಸಂತೋಷ್ ಮೈಸೂರು ವಿಶ್ವವಿದ್ಯಾಲಯದ ಹಾಕಿ ತಂಡಕ್ಕೂ ಆಯ್ಕೆಯಾಗಿದ್ದರು.

1966ರಲ್ಲಿ ವಕೀಲರಾಗಿ ವೃತ್ತಿ ಆರಂಭಿಸಿದ ಅವರು, 84ರಲ್ಲಿ ರಾಜ್ಯದ ಅಡ್ವೊಕೇಟ್ ಜನರಲ್ ಆದರು. ಎರಡು ಸಲ ಭಾರತದ ಅಡಿಷನಲ್ ಸಾಲಿಸಿಟರ್ ಜನರಲ್ ಕೂಡಾ ಆದರು. 1999ರ ಜನವರಿ 8ರಂದು ಸುಪ್ರೀಂಕೋರ್ಟಿನ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿ, 2005ರ ಜೂನ್‌ನಲ್ಲಿ ನಿವೃತ್ತರಾದರು. 2006ರ ಆಗಸ್ಟ್‌ನಲ್ಲಿ ಕರ್ನಾಟಕ ಲೋಕಾಯುಕ್ತರಾಗಿ ನೇಮಕಗೊಂಡರು.

ಕರ್ನಾಟಕ ಲೋಕಾಯುಕ್ತ ಕಾಯ್ದೆ (1984) ಪ್ರಕಾರ, ಆಡಳಿತ ಸುಧಾರಣೆಗಾಗಿಯೇ ಈ ಹುದ್ದೆಯನ್ನು ಸೃಷ್ಟಿಸಲಾಗಿದೆ. ಆಡಳಿತದಲ್ಲಿ ಭ್ರಷ್ಟಾಚಾರ ಹತ್ತಿಕ್ಕುವುದು, ಸ್ವಜನಪಕ್ಷಪಾತ ತಡೆಯುವುದು ಹಾಗೂ ಆಡಳಿತದಲ್ಲಿ ಅಶಿಸ್ತಿನ ವಿರುದ್ಧ ಚಾಟಿ ಬೀಸುವುದು ಲೋಕಾಯುಕ್ತರ ಮುಖ್ಯ ಕೆಲಸ. ‘ಇದೆಲ್ಲ ಕಾಗದದ ಮೇಲಿನ ಕೆಲಸ. ಹುದ್ದೆ ಇರುವುದು ಕೆಂಪುಗೂಟದ ಕಾರಿನಲ್ಲಿ ತಿರುಗುವುದಕ್ಕೆ’ ಎಂದು ಸಂತೋಷ್ ಹೆಗ್ಡೆಯವರು ಭಾವಿಸಿದ್ದರೆ ಇವತ್ತಿಗೂ ಸುಖವಾಗಿರಬಹುದಿತ್ತು. ಆದರೆ ಸಜ್ಜನ, ಪ್ರಾಮಾಣಿಕ ಹಾಗೂ ಎದೆಗಾರಿಕೆಯುಳ್ಳ ಸಂತೋಷ್ ಹೆಗ್ಡೆ ಸುಮ್ಮನೆ ಕೂರಲಿಲ್ಲ. ಲೋಕಾಯುಕ್ತರಾಗಿದ್ದ ಅವಧಿಯಲ್ಲಿ ಭ್ರಷ್ಟರ ವಿರುದ್ಧ ಮಹಾಸಮರವನ್ನೇ ಸಾರಿದರು. ಕೋಟ್ಯಂತರ ಮೌಲ್ಯದ ಅಕ್ರಮ ಆಸ್ತಿಪಾಸ್ತಿಗಳನ್ನು ಪತ್ತೆ ಹಚ್ಚಿದರು. 3 ವರ್ಷದಲ್ಲಿ 20 ಸಾವಿರಕ್ಕೂ ಹೆಚ್ಚು ಅನ್ಯಾಯದ ಪ್ರಕರಣಗಳ ದೂರು ಪಡೆದರು. 8000ಕ್ಕೂ ಹೆಚ್ಚು ಪ್ರಕರಣಗಳಲ್ಲಿ ನ್ಯಾಯ ಒದಗಿಸಿದರು. ಇದರಿಂದಾಗಿಯೇ ಸರಕಾರದ ‘ಭ್ರಷ್ಟಕೂಟ’ದ ಕಿರುಕುಳಕ್ಕೂ ಒಳಗಾದರು. ಭ್ರಷ್ಟರ ಕಾಟ ಎಷ್ಟು ಹೆಚ್ಚಾಯಿತೆಂದರೆ, ಕೊನೆಗೂ ಅಸಹಾಯಕರಾಗಿ ಸಿಟ್ಟಿನಿಂದ ರಾಜೀನಾಮೆ ಒಗೆದರು. ಸರಕಾರಕ್ಕೆ ಇದು ನಿಜಕ್ಕೂ ದೊಡ್ಡ ಶಾಕ್ ಟ್ರೀಟ್‌ಮೆಂಟ್!

ಸಂತೋಷ್ ಹೆಗ್ಡೆ ನೇರ ಮಾತಿನ ಸರಳ ಜೀವಿ. ಉನ್ನತ ಹುದ್ದೆಯಲ್ಲಿದ್ದರೂ ಯಾವ ಆಮಿಷಕ್ಕೂ ಒಳಗಾಗಲಿಲ್ಲ. ಸುಪ್ರೀಂಕೋರ್ಟ್ ನ್ಯಾಯಾಧೀಶರಾಗಿದ್ದಾಗ ಜಕ್ಕೂರಿನಲ್ಲಿ ಸರಕಾರ ನಿವೇಶನ ಕೊಟ್ಟರೂ ತಿರಸ್ಕರಿಸಿದರು. ಬೆಂಗಳೂರಿನಲ್ಲಿ ತಂದೆ ಖರೀದಿಸಿ ಕೊಟ್ಟಿದ್ದ ಮನೆಯನ್ನು ಮಾರಿ, ಸ್ವಂತಕ್ಕೊಂದು ಮನೆ ಕೊಂಡರು. ಇವರ ತಂದೆ ಕೌಡೂರು ಸದಾನಂದ ಹೆಗ್ಡೆಯವರೂ ಸಾತ್ವಿಕ ಸಿಟ್ಟಿನ ಮನುಷ್ಯ. ಸುಪ್ರೀಂಕೋರ್ಟ್ ನ್ಯಾಯಾಧೀಶರಾಗಿದ್ದಾಗ ತಮ್ಮ ಸೀನಿಯಾರಿಟಿ ಮೀರಿ ಇನ್ನೊಬ್ಬರಿಗೆ ಭಡ್ತಿ ಕೊಟ್ಟದ್ದನ್ನು ಪ್ರತಿಭಟಿಸಿ ನ್ಯಾಯಮೂರ್ತಿ ಹುದ್ದೆಗೆ ರಾಜೀನಾಮೆ ನೀಡಿದ್ದರು. ಆ ಬಳಿಕ ಲೋಕಸಭೆಗೆ ಸ್ಪರ್ಧಿಸಿ, ಆಯ್ಕೆಯಾಗಿ ಸ್ಪೀಕರ್ ಕೂಡಾ ಆದವರು.

70ರ ಹರೆಯದಲ್ಲೂ ಸಾಕಷ್ಟು ಕ್ರಿಯಾಶೀಲರಾಗಿರುವ ಸಂತೋಷ್ ಹೆಗ್ಡೆ ರಾಜೀನಾಮೆಯ ಮೂಲಕ ಪ್ರಾಮಾಣಿಕ ಅಧಿಕಾರಿಗಳಲ್ಲಿ ಸ್ಥೈರ್ಯ ತುಂಬಿದ್ದಾರೆ. ವೋಡ್ಕಾಪ್ರಿಯ ಸಂತೋಷ್ ಹೆಗ್ಡೆ ಅವರಿಗೆ ಮಕ್ಕಳಿಲ್ಲ. ಸಾಕುನಾಯಿಯ ಜತೆಗೆ ಸಂತೋಷದಿಂದಿರುವ ಅವರು, ಇದೀಗ ‘ಕರ್ನಾಟಕದ ಕಣ್ಮಣಿ’ಯಾಗಿದ್ದಾರೆ. ವಯೋಸಹಜ ಡಯಾಬಿಟಿಸ್ ಮತ್ತು ಹೈ ಬಿ.ಪಿ ಜತೆಗಿದ್ದರೂ ಸಂತೋಷದಿಂದ ದುಡಿಯುತ್ತಿದ್ದ ಸಂತೋಷ್ ಹೆಗ್ಡೆ ಅವರಿಗೆ ಮುಂದಿನ ಜೀವನ ಹೆಚ್ಚು ನೆಮ್ಮದಿ ನೀಡಲಿ.

## ನಂಬರ್ 3 ಸೈನಾ!




ವಿಶ್ವಕಪ್ ಫುಟ್‌ಬಾಲ್ ಆಟಾಟೋಪದ ಮಧ್ಯೆಯೂ ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್‌ವಾಲ್ ಕ್ರೀಡಾಪುಟಗಳಲ್ಲಿ ಮಿಂಚಿದ್ದಾರೆ. ಸಿಂಗಾಪುರ ಓಪನ್ ಸೂಪರ್ ಸೀರೀಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡು ಭಾರತದ ಕೀರ್ತಿಪತಾಕೆ ಎತ್ತಿ ಹಿಡಿದಿದ್ದಾರೆ. ಇದರ ಬೆನ್ನಲ್ಲೆ ಜಾಗತಿಕ ಬ್ಯಾಡ್ಮಿಂಟನ್ ರ್‍ಯಾಂಕಿಂಗ್‌ನಲ್ಲಿ ಸೈನಾ ಮೂರನೇ ಸ್ಥಾನಕ್ಕೆ ಏರಿದ್ದಾರೆ.

ಈ ಹಿಂದೆ ಭಾರತದ ಪ್ರಕಾಶ್ ಪಡುಕೋಣೆ ವಿಶ್ವ ನಂಬರ್ ಒನ್ ರ್‍ಯಾಂಕಿಂಗ್‌ಗೆ ಏರಿದ್ದರು. ಅದು ಬಿಟ್ಟರೆ ಇದೀಗ ಸೈನಾ ಅವರದ್ದೇ ದಾಖಲೆ. ಸೈನಾ ಅವರ ಕೋಚ್ ಪುಲ್ಲೇಲ ಗೋಪಿಚಂದ್ ಕೂಡಾ ಶಿಷ್ಯೆಯ ಮಟ್ಟಕ್ಕೆ ಏರಲಾಗಿಲ್ಲ. ಅವರು 2001ರಲ್ಲಿ ಆಲ್ ಇಂಗ್ಲೆಂಡ್ ಚಾಂಪಿಯನ್ ಗೆದ್ದಾಗ ವಿಶ್ವದ 4ನೇ ಆಟಗಾರರಾಗಿದ್ದರು. ಇದೀಗ ಇಂಡೋನೇಷ್ಯಾ ಓಪನ್ ಕಪ್‌ನಲ್ಲಿ ಸೈನಾ ತೋರಿಸಿದ ಸಾಧನೆ ನೋಡಿದರೆ ಇನ್ನೇನು ಸೈನಾ ಕೂಡಾ ವಿಶ್ವದ ನಂಬರ್ ಒನ್ ಆಗುವ ದಿನಗಳು ದೂರವಿಲ್ಲ.

★ ಹನಿ